

ಪ್ರೋಗ್ರಾಮಿಂಗ್ ಬರೆಯತೊಡಗಿದ್ದೇ ಆಗ. ಅಮೆರಿಕದಲ್ಲಿ ಕೃತಕ ಜ್ಞಾನ ಕ್ಷೇತ್ರ ಆಗ ಕಣ್ಣುಬಿಟ್ಟಿದ್ದು. ಈಗ ಅದು ಬಹಳ ವಿಶಾಲವಾಗಿದೆ. ವಿಶ್ವಕ್ಕೇ ಹಲವು ಮಾದರಿಗಳನ್ನೂ ಒದಗಿಸುತ್ತಿದೆ.

'ಇನ್ನು ಹತ್ತು ವರ್ಷಗಳಲ್ಲಿ ಕಂಪ್ಯೂಟರೊಂದು ವಿಶ್ವ ಚೆಸ್ ಚಾಂಪಿಯನ್ ಆಗುತ್ತದೆ' ಎಂದು 1957ರಲ್ಲಿ ಅಮೆರಿಕದ ರಾಜಕೀಯ ವಿಜ್ಞಾನಿ ಹರ್ಬರ್ಟ್ ಸೈಮನ್ ಊಹಿಸಿದ್ದರು. 1990ರ ದಶಕದವರೆಗೆ ಅವರ ಊಹೆ ನಿಜವಾಗಲಿಲ್ಲ. 'ಐಬಿಎಂ' ಕಂಪೆನಿ ಅಭಿವೃದ್ಧಿ ಪಡಿಸಿದ್ದ 'ಬಿಗ್ ಬ್ಲೂ' ಕಂಪ್ಯೂಟರ್ ರಷ್ಯಾದ ಗ್ರ್ಯಾಂಡ್ ಮಾಸ್ಟರ್ ಗ್ಯಾರಿ ಕ್ಯಾಸ್ಪರೊವ್ ಅವರನ್ನು ಸೋಲಿಸಿದ್ದು 1997ರಲ್ಲಿ. ಚದುರಂಗದಾಟದ ರೋಚಕ ನಡೆಗಳನ್ನೆಲ್ಲಾ ಚಕಚಕನೆ ನಿರ್ಧರಿಸುವ ಗ್ರ್ಯಾಂಡ್ ಮಾಸ್ಟರ್‌ಗಳ ಸಮಕ್ಕೆ ಒಂದು ಕಂಪ್ಯೂಟರ್ ಅನ್ನು ನಿಲ್ಲಿಸಿದ್ದು ಕೃತಕ ಬುದ್ಧಿಮತ್ತೆಯ ಮೇಲೆ ಮನುಷ್ಯನಿಗೇ ಇರುವ ವಿಶ್ವಾಸಕ್ಕೆ ಹಿಡಿದ ಕನ್ನಡಿ.

ಮನುಷ್ಯನ ಮೆದುಳಿಗೆ ಸರಾಸರಿ ಹೊಂದುವಂಥ ಯಂತ್ರ ಏಳೆಂಟು ವರ್ಷಗಳಲ್ಲಿಯೇ ತಯಾರಾಗುತ್ತದೆ ಎಂದು 1970ರಲ್ಲಿ ಮರ್ವಿನ್ ಮಿನ್‌ಸ್ಕಿ ಹೇಳಿದ್ದರು. ಆದರೆ ಅದು ಇದುವರೆಗೆ ಸಾಕಾರಗೊಂಡಿಲ್ಲ.

### ಹೊಸ ತಂತ್ರಜ್ಞಾನದ ಒಳಹೊರಗು

'ನ್ಯೂರಲ್ ನೆಟ್‌ವರ್ಕ್ಸ್' ಈ ಕಾಲದ ತಾಂತ್ರಿಕ ಬೇರುಗಳು. ಮನುಷ್ಯನ ಮೆದುಳಿನ ನರಮಂಡಲಕ್ಕೆ ತುಲನೆ ಮಾಡಿ ಈ ಸಂಪರ್ಕ ಜಾಲವನ್ನು ಬಗೆದು ನೋಡಬೇಕಾಗುತ್ತದೆ. ಮಾನವ ಮೆದುಳಿನ ಪರಿಕಲ್ಪನೆಯಿಂದ ಮನುಷ್ಯನೇ ರೂಪಿಸಿದ ಜಾಲವಿದು. ಹಲವು ಪದರಗಳಲ್ಲಿ ಮಾಹಿತಿ ಪ್ರಕ್ರಿಯೆ ನಡೆಯುವ ಜಾಲವಿದು. ಈ ಪದರಗಳ ನಡುವಿನ ಸಂಪರ್ಕದ ಪ್ರಕ್ರಿಯೆಯನ್ನು 'ಡೀಪ್ ಲರ್ನಿಂಗ್' ಅಥವಾ 'ಆಳ ಅಧ್ಯಯನ' ಎಂದು ವಿಜ್ಞಾನಿಗಳು ಗುರುತಿಸಿದ್ದಾರೆ. 'ಗೂಗಲ್', 'ಅಮೆಜಾನ್' ಹಾಗೂ 'ಆ್ಯಪಲ್'ನಂಥ ಕಂಪೆನಿಗಳು ಇಂಥ ತಂತ್ರಜ್ಞಾನ ಅಭಿವೃದ್ಧಿಯ ಮೇಲೆ ಹೆಚ್ಚು ಹಣವನ್ನು ವಿನಿಯೋಗಿಸುತ್ತಿವೆ.

'ಪೇಜ್ ರ‍್ಯಾಂಕ್' ಎಂಬ ತಂತ್ರಜ್ಞಾನವನ್ನು 'ಗೂಗಲ್' ಹುಡುಕುತಾಣ ಅವಲಂಬಿಸಿದ್ದು, ಮುಂದೆ ಚಿತ್ರಗಳನ್ನು, ಧ್ವನಿಗಳನ್ನು ಸಹ ಪಠ್ಯದಷ್ಟೇ ನಿಖರವಾಗಿ ಗುರುತಿಸಿ ಹುಡುಕುವ ಕೆಲಸವನ್ನು ನಿರ್ವಹಿಸಲಿದೆ. ಇದು ಈಗಾಗಲೇ ಭಾಗಶಃ ಸಾಧ್ಯವಾಗಿದ್ದು, ಭವಿಷ್ಯದಲ್ಲಿ ಉತ್ತಮ ಫಲಿತಾಂಶವನ್ನು ನೀಡೀತೆಂಬ ನಿರೀಕ್ಷೆ 'ಗೂಗಲ್' ಕಂಪೆನಿಯವರದ್ದು.

ಇಷ್ಟೇ ಅಲ್ಲದೆ ಗೃಹ ನಿರ್ವಹಣೆ, ಆಹಾರ ಪೂರೈಕೆ ಹಾಗೂ ಸಭೆಗಳನ್ನು ಆಯೋಜಿಸಲು ಧ್ವನಿ ಸಹಾಯ ವ್ಯವಸ್ಥೆಯನ್ನು 'ಗೂಗಲ್', 'ಅಮೆಜಾನ್' ಹಾಗೂ 'ಆಪಲ್' ಕಂಪೆನಿಗಳು ಒದಗಿಸುತ್ತಿವೆ. 'ಸ್ಟಾರ್ ವಾರ್ಸ್' ಇಂಗ್ಲಿಷ್ ಚಿತ್ರದಲ್ಲಿ ನಾವು ಕಂಡ 'ದಿ ಜೆಟ್ಸನ್' ಹಾಗೂ 'ಆರ್2ಡಿ2' ವ್ಯವಸ್ಥೆ ಸಾಕಾರಗೊಳ್ಳುವ ದಿನಗಳೂ ಹೆಚ್ಚು ದೂರವಿಲ್ಲ. ■




ಶ್ರೀ ಪಂಚಮುಖಿ ಜ್ಯೋತಿಷ್ಯಂ

INDIA'S MOST POPULAR ASTROLOGER

ಪಂಡಿತ. ಶ್ರೀ ಗಣೇಶ್ ಕುಮಾರ್ ಶ್ರೀ ಶ್ರೀ ಹನುಮಾನ್ ಆರಾಧಕರು

ಕೇರಳ, ಕಲ್ಕತ್ತಾದ ಸಾವಿರಾರು ವರ್ಷಗಳ ಹಿಂದಿನ ಪ್ರಾಚೀನ ನಾಡಿಗ್ರಂಥ ಆಧಾರದಿಂದ ಸರ್ವಮಂತ್ರ ವಿದ್ಯೆ, ಜ್ಯೋತಿಷ್ಯ ಶಾಸ್ತ್ರ



ಪಂಚಮಹಾಗುರುಗಳ ಬೋಧನೆಯಿಂದ ಯೋಗ ಯಜ್ಞಗಳ ಮೂಲಕ ಸರ್ವ ವಿದ್ಯೆಯನ್ನು ತಮ್ಮ ವಶದಲ್ಲಿರಿಸಿಕೊಂಡಿರುವವರು. ವಶೀಕರಣ, ಮದುವೆ, ಸಂತಾನ, ದಾಂಪತ್ಯ, ಪ್ರೇಮವಿಚಾರ, ಲೈಂಗಿಕ, ಮಾನಸಿಕ, ಗೃಹಶಾಂತಿ, ವಿದ್ಯೆ, ಆರೋಗ್ಯ, ವಿದೇಶ ಪ್ರಯಾಣ, ಹಣಕಾಸು, ವ್ಯಾಪಾರ,ಉದ್ಯೋಗ, ಕೋರ್ಟ್ ಕೇಸು, ಸಾಲಬಾಧೆ, ಮಾಟಬಾಧೆ, ಶತ್ರುಕಾಟ, ಅಲ್ಲದೆ ರಾಜಯೋಗ ವಶ ಮತ್ತು ಅಖಂಡ ಯೋಗವಶಗಳು, ಇನ್ನಿತರ ನಿಮ್ಮ ಯಾವುದೇ ಕಠಿಣ, ನಿಗೂಢ ಮತ್ತು ಗುಪ್ತ ಸಮಸ್ಯೆಗಳಿಗೆ, ಸಲಹೆ ಮತ್ತು ಪರಿಹಾರ ಶತಸಿದ್ಧ.

600 ವರ್ಷ ಹಳೆಯ ಪಂಚಸಿದ್ಧಿ ತಂತ್ರಗಳಿಂದ ನಿಮ್ಮ ದುಶ್ಚಟ, ದೀರ್ಘಾವಧಿ, ಲೈಂಗಿಕ, ಸಂತಾನ, ಸಮಸ್ಯೆಗಳಿಗೆ ಸನಾತನ ಪ್ರಕ್ರಿಯೆಗಳಿಂದ ಅತೀ ಶೀಘ್ರದಲ್ಲಿ ಸಮಗ್ರ ಪರಿಹಾರ ಕಲ್ಪಿಸುತ್ತಿರುವವರು.

ವಿ.ಸೂ.: ಇಲ್ಲಿ ಹೇಳುವ ವಿಷಯಗಳೆಲ್ಲವೂ ಗುಪ್ತವಾಗಿರುವುದರಿಂದ ನಿಮ್ಮ ಯಾವುದೇ ಸಮಸ್ಯೆಗಳನ್ನು ಹೇಳಲು ಹಿಂಜರಿಯಬೇಕಾಗಿಲ್ಲ. ದೂರವಾಣಿ ಹಾಗೂ ಪತ್ರದ ಮೂಲಕ ವಿವರಗಳನ್ನು ಪಡೆಯಬಹುದು.

ಬೆಂಗಳೂರು ಖಾಯಂ ಮನೆ ವಿಳಾಸ ನಂ.167/3, ಮೊದಲನೇ ಮಹಡಿ, 1ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಮುತ್ತುರಾಯಸ್ವಾಮಿ ದೇವಸ್ಥಾನದ ಹತ್ತಿರ, ಮೈಸೂರು ಸರ್ಕಲ್, (ಸಿರಸಿ ವೃತ್ತ), ಚಾಮರಾಜಪೇಟೆ, ಬೆಂಗಳೂರು–18.

ಸಮಸ್ಯೆ ಏನೇ ಇರಲಿ, ಎಷ್ಟೇ ಕಠಿಣವಾಗಿರಲಿ 600 ವರ್ಷಗಳ ಹಳೆಯ 108 ಜ್ಯೋತಿಷ್ಯ ತಂತ್ರಗಳಿಂದ ಮಹೋನ್ನತ ಪರಿಹಾರಗಳು.

ಮೈಸೂರಿನಲ್ಲಿಯೂ ಲಭ್ಯವಿರುತ್ತಾರೆ

ಬೆಂಗಳೂರು ಮೈಸೂರು 9880444450